ಖಾಲಿ. ಇಲ್ಲ.

ಎ. ಕಾವೇರಿಯಿಂದ ಬರತಕ್ಕ ನೀರಿನ ಸೋರುವಿಕೆಯ ಪ್ರಮಾಣ ಶೇ. ಸರಾಸರಿ 32 ರಿಂದ 34 ಷ್ಟು ಇರುತ್ತದೆ. ಇದನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಉದಾ: ಶಾಶ್ವತವಾಗಿ ನೀರು ಸೋರುವಿಕೆಯನ್ನು ತಡೆಗಟ್ಟಲು ಮೆಕ್ಯಾನಿಕಲ್ ಕ್ಲಾಂಪ್ಸ್ ಅಳವಡಿಸುವುದು, ವಾಹನ ದಟ್ಟಣೆ ಇರುವ ಸ್ಥಳಗಳಲ್ಲಿ ಮೆದು ಉಕ್ಕಿನ ಕೊಳವೆಗಳನ್ನು ಬೆಸುಗೆ ಮಾಡಿ ಅಳವಡಿಸುವುದು, ದೋಷಪೀರಿತ ಮಾಪನಗಳ ಬದಲಾವಣೆ ಅನಧಿಕೃತ ಸಮಪರ್ಕಗಳನ್ನು ನಿಯಂತ್ರಿಸುವುದು ಹಾಗೂ ಸಕ್ರಮಗೊಳಿಸುವುದು ಮುಂತಾದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣ ತಗ್ಗಿಸುವ ದಿಶೆಯಲ್ಲಿ ಕಿರು ಯೋಜನೆಯನ್ನು ಕೈಗೊಂಡಿದ್ದು ಅಧ್ಯಯನಕ್ಕಾಗಿ ಒಂದು ವಿಭಾಗವನ್ನು ನಿಯೋಜಿಸಲಾಗಿದೆ.

1592(2119) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬರಪ್ರದೇಶಗಳಲ್ಲಿ ಹೆಚ್ಚು ನೀರು ಬಳಕೆಯಾಗುವ ಕಬ್ಬು, ಭತ್ತ ಮುಂತಾದ ಬೆಳೆಗಳ ನಿಷೇದ ಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ ;

ಆ. ರೈತರು ನೀರಿನ ಅಭಾವ, ಬೆಳೆ ಹಾನಿ, ಬೆಲೆ ಇಳಿತ ಮುಂತಾದ ಸಂಕಷ್ಟದಲ್ಲಿರುವಾಗ ಇಂಥ ಕ್ರಮ ಜರುಗಿಸುವ ವಿಚಾರ ನ್ಯಾಯಸಮ್ಮತವೇ ;

ಇ. ಬರಪೀಡಿತ ಪ್ರದೇಶಗಳಲ್ಲಿ ಜಲಮೂಲ ಸಂವರ್ಧನೆಗೆ ತುರ್ತು ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಲು ಸರ್ಕಾರ ಚಿಂತಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಸದ್ಯಕ್ಕೆ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ. ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಪ್ರಶ್ನೆ 'ಅ' , 'ಆ'ಗೆ ನೀಡಿರುವ ಉತ್ತರಗಳಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1593 (2120) ಶ್ರೀ ಕೃಷ್ಣಪಾಲೇಮಾರ್. ಜೆ, ಎಂಎಲ್ಎ (ಸುರತ್ಕಲ್) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ. ಮಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಮಹಾನಗರ ಪಾಲಿಕೆಯ ಆಟದ ಮೈದಾನಗಳೆಷ್ಟು ಹಾಗೂ ಉದ್ಯಾನವನಗಳೆಷ್ಟು ;

ಆ. ಈ ಆಟದ ಮೈದಾನ ಮತ್ತು ಉದ್ಯಾನವನಗಳಿಗೆ ಕಳೆದ 3 ವರ್ಷಗಳಿಂದ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣ ಎಷ್ಟು ;

ಇ. ಎಷ್ಟು ಆಟದ ಮೈದಾನ ಮತ್ತು ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಸಮಯಂ ಸೇವಾ ಸಂಸ್ಥೆಗಳು ಹಾಗೂ ನಿವಾಸಿಗರ ಸಂಘಗಳು ಮುಂದೆ ಬಂದಿವೆ ;

ಈ. ಅಂತಹವರಲ್ಲಿ ಎಷ್ಟು ಸಂಸ್ಥೆಗಳಿಗೆ ನಿರ್ವಹಣಾ ಜವಾಬ್ದಾರಿ ನೀಡಲಾಗಿದೆ ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ಆಟದ ಮೈದಾನಗಳು – 9

ಉದ್ಯಾನವನಗಳು – 12

ಆ. ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ಒಟ್ಟು ರೂ. 7,42,643–00 ನ್ನು ಖರ್ಚು ಮಾಡಲಾಗಿದೆ.